
ಕೆ.ವಿ. ತಿರುಮಲೇಶ್

# ಕೀಟನಾಶಕ ಸಾಬಿ




ಎಲ್ಲರ ಕುರಿತೂ ಹೇಳಿದ್ದಾಗಿದೆ
ಕೀಟನಾಶಕ ಸಾಬಿಯ ಕುರಿತು
ಹೇಳಿಲ್ಲವಲ್ಲ ಈ ಪಾಪ ಯಾಕೆ?

ನನ್ನ ಹಳೇ ದೋಸ್ತವನು
ಶಂಕರಮಠದ ಶ್ರೀ
ರಸ್ತೆ ಪಕ್ಕದಲೇ ವಸತಿ
ತನ್ನ ಕಾಲಿನ ಮೇಲೆ ತಾನೆ ನಿಂ
ತಿರುವಾತ
ಪ್ರತಿ ಸಂಜೆ ಮತ್ತು ಆ ತರುವಾತ
ರ್‍ಯಾಲಿ ಸೈಕಲ್ನ ಅದರ ಸ್ಟಾಂಡಿಗೆ ಹಾಕಿ
ಅದರ ಮೇಲೆಲ್ಲಾ ತನ್ನ ಸರಕುಗಳ ಹರಡಿ

ಕರಿಮಣಿ ಗಿರಿಮಣಿ ಕೆಂಪಿನ ಮಣಿಸರ
ಹೇರ್ ಪಿನ್ ರಿಬ್ಬನ್ ಸೂಜಿ ಮತ್ತು ದಾರ
ಗುಲಾಬಿ ಗಿಡಕ್ಕೆ ಪ್ರತ್ಯೇಕ ಸಾರ
ಬಟ್ಟೆಗೆ ಹಾಕಲು ವಿಶಿಷ್ಟ ಕ್ಷಾರ

ಏನಿರದಿದ್ದರು ಇಲಿ ಪಾಷಾಣ
ಕೀಟನಾಶಕಗಳ ವಿಧವಿಧ ಪೊಟ್ಟಣ
ಇಂದಿಲ್ಲದಿದ್ದರೆ ನಾಳೆಗೆ ಬಿಲ್ ಕುಲ್
ನೀವು ಬರೋ ಹೊತ್ತಿಗೆ ಬೇಕಾದ್ದು ದಾಖಲ್

ಹೈದರಾಬಾದಿಗೆ ನಾ ಬಂದ ಲಾಗಾಯ್ತು
ನೋಡಿರುವೆನಿಲ್ಲಿ ಈ ವ್ಯಾಪಾರಿಯನು
ವಾಲ್ಮೀಕಿ ಕಣ್ವ ಅಗಸ್ತ್ಯರ ಬಗ್ಗೆ
ಓದಿದ್ದೇನೆ
ಗ್ರಂಥಗಳಲ್ಲಿ
ಆ ಋಷಿಗಳಲ್ಲಿ ಯಾರೋ ಒಬ್ಬರು